PW- 02

CW-01

**ದಿನಾಂಕ: 15.06.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ನನ್ನ ಅಕ್ಕನ ಶವವನ್ನು ನೋಡಿದಾಗ ಅವಳು ಸಾಮಾನ್ಯವಾಗಿ ಧರಿಸಿಸುತ್ತಿದ್ದ ಅವಳ ಆಭರಣಗಳಾದ 6 ಬಂಗಾರದ ಬಳೆಗಳು, ಒಂದು ಲಾಕೇಟ ಇರುವ ಬಂಗಾರದ ಚೈನ್ ಸರ ಕಾಣಲಿಲ್ಲ. ನಾನು ಸ್ಥಳದಲ್ಲಿಯ ಸ್ಥಿತಿಗತಿ ನೋಡಿ ನನ್ನ ಅಕ್ಕನ ಬಂಗಾರದ ಆಬರಣಗಳಿಗಾಗಿ ಅವಳನ್ನು ಆಭರಣಗಳಿಗಾಗಿ ಕೊಲೆ ಮಾಡಿ, ಅವುಗಳನ್ನು ತೆಗೆದುಕೊಂಡು ಹೋಗಲಾಗಿತ್ತು ಎಂದು ಕಂಡು ಬಂದಿತು. ನಂತರ ಸ್ಥಳಕ್ಕೆ ಪೋಲಿಸರು ಬಂದರು. ನನ್ನ ಅಕ್ಕನ ಕೊಲೆಯ ಪಂಚನಾಮೆ ಮಾಡಿದರು. ಪೋಲಿಸರು ನನ್ನ ಅಕ್ಕನ ಕೈ ಮತ್ತು ಕಣ್ಣುಗಳನ್ನು ಕಟ್ಟಿದ್ದನ್ನು ನೋಡಿದರು. ಪೋಲಿಸರು ದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿರುವುದನ್ನು ನೋಡಿದರು. ಪೋಲಿಸರು 1 1 /2 ತಾಸಿನವರೆಗೆ ಪರಿಶೀಲನೆ ಮಾಡಿದರು. ನಂತರ ನನ್ನ ಅಕ್ಕನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಪೋಲಿಸರು ತೆಗೆದುಕೊಂಡು ಹೋದರು. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಮನೆಗೆ ಬಂದಿತು. ಮುಂದೇನಾಯ್ತು ಎನ್ನುವ ಅಭಿಯೋಜಕರ ಪ್ರಶ್ನೆಗೆ ಸಾಕ್ಷಿಯು ಮೌನವಾಗಿರುತ್ತಾನೆ. (ಈ ಹಂತದಲ್ಲಿ ಸಾಕ್ಷಿಯು ಅಭಿಯೋಜಕರ ಪ್ರಶ್ನೆಗೆ ನಿರುತ್ತರವಾಗಿ ನಿಂತಿರುವುದರಿಂದ ಸುಧಾರಿಸಿಕೊಳ್ಳಲು ವಿಶ್ರಾಂತಿ ನೀಡಿ ಪುನಃ ಕಟಕಟೆಗೆ ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯ್ತು.)

ಸಾಕ್ಷಿಗೆ ತಾಃ14.09.2023 ರಂದು ನ್ಯಾಯಾಲಯ ಮಧ್ಯಂತರ ಆದೇಶದ ಮೇರೆಗೆ ಬಿಡುಗಡೆ ಮಾಡಿದ ಆಭರಣಗಳನ್ನು ತೋರಿಸಿದಾಗ ಸದರಿ ಆಬರಣಗಳನ್ನು ಗುರುತಿಸಿ ಸದರಿ ಆಭರಣಗಳು ತನ್ನ ಅಕ್ಕನ ಮೈ ಮೇಲಿದ್ದ ಆಭರಣಗಳು ಹಾಗೂ ಸಾಮಾನ್ಯವಾಗಿ ಅವಳು ಧರಿಸುತ್ತಿದ್ದಳು ಎಂದು ನುಡಿಯುತ್ತಾರೆ. ಸಾಕ್ಷಿಯು ಆಭರಣಗಳನ್ನು ಗುರುತಿಸಿದ್ದರಿಂದ ಎರಡು ದೊಡ್ಡ ಗಾತ್ರದ ಬಳೆಗಳನ್ನು ಮುಮಾ-1 ಎಂದು, 4 ಸಣ್ಣ ಗಾತ್ರದ ಬಳೆಗಳನ್ನು ಮುಮಾ-2 ಎಂದು, ಒಂದು ಲಾಕೇಟ ಇರುವ ಬಂಗಾರದ ಸರವನ್ನು ಮುಮಾ-3 ಎಂದು ಗುರುತಿಸಲಾಯ್ತು. ಮುಂದೇನಾಯ್ತು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಸಾಕ್ಷಿಯು ಅಭಿಯೋಜಕರ ಪ್ರಶ್ನೆಗೆ ನಿರುತ್ತರವಾಗಿ ನಿಂತಿದ್ದು, ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಘಟನೆ ಬಗ್ಗೆ ತಿಳಿದುಕೊಂಡ ನಂತರ ಮಧ್ಯಾಹ್ನ 12.00 ಗಂಟೆಗೆ ಅದೇ ದಿನ ಶಿಗ್ಗಾಂವ ಪೋಲಿಸ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದಾಗ ಸದರಿ ತಾನು ಸಲ್ಲಿಸಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯ್ತು. ನಾನು ದೂರು ಸಲ್ಲಿಸಿದ ನಂತರ ಪೋಲಿಸರು ಪ್ರ.ವ.ವ.ನ್ನು ತಯಾರಿಸಿ, ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿ. ಸದರಿ

ಪ್ರ.ವ.ವ.ನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯ್ತು. ದೂರು ಬರೆದವರ ಪೂರ್ಣ ಹೆಸರು , ವಿಳಾಸ ನನಗೆ ಗೊತ್ತಿಲ್ಲ. ನಿಪಿ-6 ನ್ನು ನಾನೇ ಬರೆಯಿಸಿರುತ್ತೇನೆ. ದೂರು ಸಲ್ಲಿಸಿದ ನಂತರ ಪೋಲಿಸರು ಮನೆಗೆ ಬಂದು ನಾನು ತೋರಿಸಿದಂತೆ ನಮ್ಮ ಅಕ್ಕಳ ಶವದ ಪಂಚನಾಮೆಯನ್ನು ಮದ್ಯಾಹ್ನ 1.15 ರಿಂದ 3.00 ವರೆಗೆ ಮಾಡಿರುತ್ತಾರೆ ಎಂದರೆ ಸರಿ. ನಂತರ ಪೋಲಿಸರು ನನ್ನ ಅಕ್ಕಳ ಕೊಲೆಯಾದ ಜಾಗವನ್ನು ನಾನು ತೋರಿಸಿದಂತೆ ಪರಿಶೀಲನೆ ಮಾಡಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು 3.15 – 4.30 ವರೆಗೆ ಮಾಡಿ, ನಕಾಶೆಯನ್ನು ತೆಗೆದಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಪೋಲಿಸರು ಸ್ಥಳದಲ್ಲಿದ್ದ ಒಡೆದ ಗಾಜಿನ ಬಳೆ ಚೂರುಗಳನ್ನು, ಅಲ್ಲಲ್ಲಿ ರಕ್ತ ಲೇಪಿತ ಎರಡು ತಲೆ ದಿಂಬುಗಳನ್ನು, ಗಾದಿಯ ಮೇಲಿದ್ದ ಅಲ್ಲಲ್ಲಿ ರಕ್ತ ಲೇಪಿತ ಬೆಡ್ ಶೀಟ್, ಅಲ್ಲಲ್ಲಿ ರಕ್ತ ಲೇಪಿತ ಸೊಳ್ಳೆ ಪರದೆ, ರಕ್ತ ಬಿದಿದ್ದ ಗಾದಿಯ ಕತ್ತರಿಸಿದ ಎರಡು ತುಂಡುಗಳು, ಮೃತಳ ಕೈ, ಕಣ್ಣು, ಕುತ್ತಿಗೆಗೆ ಸುತ್ತಿದ ಅಲ್ಲಲ್ಲಿ ರಕ್ತ ಲೇಪಿತ ಸೀರೆ, ಬಾಗಿಲ ಹೊಸ್ತಿಲ ಬಳಿಯಿದ್ದ ಒಂದು ಸಣ್ಣ ಹಿತ್ತಾಳೆ ದೀಪ, ಬೆಂಕಿಪೊಟ್ಟಣ ವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ಸಾಕ್ಷಿಗೆ ತೋರಿಸಿದಾಗ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-4 ರಿಂದ 11 ವರೆಗೆ ಗುರುತಿಸಲಾಯ್ತು. ಸದರಿ ಪಂಚನಾಮೆ ಮತ್ತು ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-8, 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಮತ್ತು ನಿಪಿ-9(ಎ) ಎಂದು ಗುರುತಿಸಲಾಯ್ತು. ಸಾಕ್ಷಿಗೆ ಎರಡು ಪೊಟೊಗಳನ್ನು ತೋರಿಸಿದಾಗ ಅವುಗಳನ್ನು ಪಂಚನಾಮೆಯ ಕಾಲಕ್ಕೆ ತೆಗೆದ ಪೊಟೊಗಳು ಎಂದು ಸೂಚಿಸಿದಂತೆ ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಪೊಟೊಗಳನ್ನು ನಿಪಿ-10, 11 ಎಂದು ಗುರುತಿಸಲಾಯ್ತು. ನಿಪಿ-10, 11 ರ ಸಿಡಿಯನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದೆ.

ನಂತರ ನನ್ನ ಅಕ್ಕನ ಮಗಳಾದ ಚಾಸಾ-12 ರವರ ಮೂಲಕ ಆರೋಪಿ ಮತ್ತು ಅವನ ಹೆಂಡತಿ ನನ್ನ ಅಕ್ಕನ ಕೊಲೆಯ ಒಂದು ವಾರದ ಮುನ್ನ ಅವಳ ಮನೆಗೆ ಬಂದು ಮಹಡಿ ಮನೆಯನ್ನು ಆಫೀಸ್‌ಗಾಗಿ ಬಾಡಿಗೆ ನಾತೆಯಿಂದ ಕೇಳಿದ್ದರು ಎಂದರೆ ಸರಿ. ನಂತರ ಆರೋಪಿತರು ಒಬ್ಬ ಮಹಿಳೆಯನ್ನು ಕರೆದುಕೊಂಡು ಬಂದಿದ್ದು, ನನ್ನ ಅಕ್ಕ ಅವರಿಗೆ ಚಹಾ ವ್ಯವಸ್ಥೆ ಮಾಡಿ ಕಳುಹಿಸಿದ್ದರು ಚಾಸಾ-12 ರವರಿಂದ ಗೊತ್ತಾಯಿತು ಎಂದರೆ ಸರಿ. ನಾನು ನನ್ನ ಅಕ್ಕನ ಮನೆಗೆ ಹೋದಾಗ ಸಿಲಿಂಡರ್ ಪೈಪ್‌ನ್ನು ಬಿಚ್ಚಿದ್ದು, ಹೊಸ್ತಿಲಿನ ಮೇಲೆ ದೀಪ ಹಚ್ಚಿ ಆರಿರುವುದು ಕಂಡು ಬಂದಿತು ಎಂದರೆ ಸರಿ. ನಂತರ ನನ್ನ ಅಕ್ಕನ ಕೊಲೆಯಾದ ನಂತರ ನನ್ನ ಅಕ್ಕನ ಮಕ್ಕಳು ಆರೋಪಿತರ ಮನೆಗೆ ಹೋದಾಗ ಮನೆ ಬಂದ್ ಇತ್ತು ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರ ಮುಂದೆ ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

ತಾಃ06.09.2019 ರಂದು ನನ್ನ ಅಕ್ಕನನ್ನು ಕೊಂದವರನ್ನು ಪೋಲಿಸರು ಹಿಡಿದುಕೊಂಡು ಬಂದಿರುತ್ತಾರೆಂದು ಗೊತ್ತಾಗಿ ನಾನು ಠಾಣೆಗೆ ಹೋಗಿ ನೋಡಲಾಗಿ, ಆರೋಪಿ ಮತ್ತು ಅವನ ಹೆಂಡತಿ ಅಲ್ಲಿದ್ದು, ಸದರಿಯವರು ನನ್ನ ಅಕ್ಕನ ಮಹಡಿ ಮನೆಯನ್ನು ಬಾಡಿಗೆ ನಾತೆಯಿಂದ ಕೇಳುವ ನೆಪ ಮಾಡಿಕೊಂಡು, ತಾಃ16.08.2019 ರಂದು ನನ್ನ ಅಕ್ಕನ ಆಭರಣಗಳಾದ ಮುಮಾ-1 ರಿಂದ 3 ಗಳನ್ನು ಕಸಿದುಕೊಳ್ಳಲು ಪ್ರಯತ್ನಿಸಿದರು ಎಂದು ಗೊತ್ತಾಯಿತು ಎಂದರೆ ಸರಿ. ನನ್ನ ಅಕ್ಕ ಸದರಿ ಆಬರಣಗಳನ್ನು ಕೊಡದೇ ಇದ್ದಾಗ ಅವಳ ಕೈ ಕಾಲುಗಳನ್ನು ಮಂಚದ ಮೇಲೆ ಕಟ್ಟಿ , ಕಣ್ಣಿಗೆ ಸೀರೆಯಿಂದ ಬಿಗಿದು, ತಲೆದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿರುತ್ತಾರೆಂದು ಗೊತ್ತಾಯಿತು ಎಂದರೆ ಸರಿ. ಆರೋಪಿ ಮತ್ತು ಅವನ ಹೆಂಡತಿ ನನ್ನ ಅಕ್ಕನನ್ನು ತಾಃ 17.08.2019 ರಂದು ಬೆಳಗಿನ ಜಾವ 3.00 ಗಂಟೆಗೆ ಸಾಯಿಸಿರಬಹುದು ಎಂದು ಗೊತ್ತಾಯಿತು ಎಂದರೆ ಸರಿ. ನನ್ನ ಅಕ್ಕಳನ್ನು ಕೊಲೆ ಮಾಡಿದ

ನಂತರ ಆರೋಪಿತರು ಅವಳ ಆಭರಣಗಳಾದ ಮುಮಾ-1 ರಿಂದ 3 ಗಳನ್ನು ಕಿತ್ತುಕೊಂಡು ತಮ್ಮ ವಾಸದ ಮನೆಯಲ್ಲಿಟ್ಟು ವಿಷಯ ಗೊತ್ತಾದರೆ ತಮ್ಮನ್ನು ಉಳಿಸುವುದಿಲ್ಲ ಎಂದು ತಿಳಿದು ತಮ್ಮ ಮಕ್ಕಳನ್ನು ಮೊದಲು ಊರಿಗೆ ಕಳುಹಿಸಿಕೊಟ್ಟು, ನಂತರ ತಾವು ಸಹ ಹುಬ್ಬಳ್ಳಿಗೆ ಹೋಗಿ ಉಣಕಲ್ ಕೆರೆಯ ಹತ್ತಿರ ತಮ್ಮ ಮಕ್ಕಳನ್ನು ಕರೆಯಿಸಿ ಮೃತ ನನ್ನ ಅಕ್ಕಳನ್ನು ಕೊಲೆ ಮಾಡಿದ ಬಗ್ಗೆ ಹೇಳಿ ಆತ್ಮಹತ್ಯೆ ಮಾಡಿಕೊಳ್ಳಲು ವಿಷಸೇವನೆ ಮಾಡಿದ್ದಾಗಿ ಗೊತ್ತಾಯಿತು ಎಂದರೆ ಸರಿ. ಆತ್ಮಹತ್ಯೆಗೆ ಯತ್ನಿಸಿ ವಿಷ ಸೇವನೆ ಮಾಡಿದ್ದರಿಂದ ಆರೋಪಿಯ ಹೆಂಡತಿ ತಾಃ25.08.2019 ರಂದು ಕೀಮ್ಸ ಆಸ್ಪತ್ರೆಯಲಿ ಮರಣ ಹೊಂದಿದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು ತಾಃ06.09.2019 ರಂದು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನಿಪಿ-3 ರಿಂದ 5 ಪೊಟೊಗಳನ್ನು ನೋಡಿ, ಪೋಲಿಸರು ಶವ ಪಂಚನಾಮೆಯ ಕಾಲಕ್ಕೆ ತೆಗೆದ ಪೊಟೊಗಳು ಮತ್ತು ಅದರಲ್ಲಿ ತನ್ನ ಮೃತ ಅಕ್ಕನ ಶವವನ್ನು ನೋಡಿ ಗುರುತಿಸುತ್ತಾರೆ. ( ಮುದ್ದೆ ಮಾಲುಗಳ ಸೀಲು ತೆಗೆಯಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿದ್ದು ಅನುಮತಿ ನೀಡಲಾಯ್ತು) ಸಾಕ್ಷಿಗೆ ತನ್ನ ಮೃತ ಅಕ್ಕನ ಮೈ ಮೇಲೆ ಇದ್ದ ಸೀರೆ, ಲಂಗ, ರವಿಕೆ, ಹಾಫ್ ಸ್ವೇಟರ್, ಉಣ್ಣೆಯ ಸ್ಕಾರ್ಫ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-12 ರಿಂದ 16 ಎಂದು ಗುರುತಿಸಲಾಯ್ತು. ನಾನು ಪೋಲಿಸರ ಠಾಣೆಯಲ್ಲಿ ನೋಡಿದ ಆರೋಪಿಯು ನ್ಯಾಯಾಲಯದ ಮುಂದೆ ಇರುತ್ತಾನೆ. ನನಗೆ ನೆನಪಿನ ಕೊರತೆಯ ಕಾರಣದಿಂದ ಮೇಲೆ ಹೇಳಿದ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಲಾಗಲಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.